the House is neither a breach of privilege nor a contempt of the House., for the process of implementation of a policy matter is conditional on a no. of factors....."

ನಾನು ನಿಮಗೆ ಸಹಾಯ ಮಾಡಲಿಕ್ಕೆ ಹೇಳುತ್ತಿದ್ದೇನೆ; ಈ ವಿಷಯ ಈ ಸದನದ ಭರವಸೆ ಕಮಿಟಿಯ ಮುಂದೆ ಬರಬೇಕು. It has to go before the Assurance Committee.

ಶ್ರೀ ಸಿ. ಬೈರೇಗೌಡ :– ಅದಕ್ಕಿಂತ ಹೆಚ್ಚಾಗಿ ಇದು ಇವತ್ತಿನ ದಿವಸ ಲಕ್ಷಾಂತರ ಜನ ಸಣ್ಣ ಮತ್ತು ಅತಿ ಸಣ್ಣ ರೈತರ ಸಮಸ್ಯೆಯಾಗಿದೆ. ಇದು ಈ ಸದನದ ಹಕ್ಕು ಚ್ಯುತಿಯಾಗುತ್ತದೆ ಇಲ್ಲವೇ ಇದನ್ನು ಪ್ರಿವಿಲೆಜ್ ಕಮಿಟಿ,ಅಥವಾ ಭರವಸೆಗಳ ಸಮಿತಿ ಮುಂದೆ ಬರುತ್ತದೆ ಎನ್ನುವದಕ್ಕಿಂತ ಮುಖ್ಯವಾಗಿ ಸರ್ಕಾರ ಇವತ್ತು ಹಾಲಿನ ಬೆಲೆಯನ್ನು ಹೆಚ್ಚು ಮಾಡಬೇಕಾಗಿದೆ. ಎಲ್ಲಾ ಬೆಲೆ ಜಾಸ್ತಿಯಾಗಿದೆ. ಆದರೆ ಕಳೆದ ಒಂದು–ಒಂದೂವರೆ ವರ್ಷದಿಂದ ಹಾಲಿನ ಬೆಲೆ ಮಾತ್ರ ಹೆಚ್ಚಾಗಿಲ್ಲ. ತತ್‌ಕ್ಷಣ ಹಾಲಿನ ಬೆಲೆಯನ್ನು ಹೆಚ್ಚು ಮಾಡುತ್ತೇವೆಂದು ಸರ್ಕಾರ ಒಂದು ಆಶ್ವಾಸನೆಯನ್ನು ಕೊಟ್ಟರೆ ನನಗೆ ತೃಪ್ತಿಯಾಗುತ್ತದೆ. ಇದರಿಂದ ಲಕ್ಷಾಂತರ ರೈತರಿಗೆ ಅನುಕೂಲವಾಗುತ್ತದೆ. ಆದುದರಿಂದ, ಸರ್ಕಾರದಿಂದ ಈ ಒಂದು ಆಶ್ವಾಸನೆ ದೊರೆತರೆ ನನಗೆ ತೃಪ್ತಿಯಾಗುತ್ತದೆ.

ಅಧ್ಯಕ್ಷರು :– ಮಾನ್ಯ ಬೈರೇಗೌಡರೇ, ನೀವು ಈಗಾಗಲೇ ಒಂದು ಆಶ್ವಾಸನೆಯನ್ನು ತೆಗೆದುಕೊಂಡು ಈ ಪ್ರಿವಿಲೆಜ್‌ನ್ನು ಮಂಡಿಸಿದ್ದೀರಿ; ಈಗ ಇನ್ನೊಂದು ಆಶ್ವಾಸನೆಯನ್ನು ಕೇಳುತ್ತಿದ್ದೀರಿ !

ಶ್ರೀ ಬಿ. ಎಸ್. ಯಡಿಯೂರಪ್ಪ :– ಶ್ರೀ ಬಸವಲಿಂಗಪ್ಪನವರನ್ನು ಒಂದಲ್ಲ ಒಂದು ರೀತಿಯಲ್ಲಿ ಸಿಕ್ಕಿಹಾಕಿಸುವ ಪ್ರಯತ್ನ ನಡೆಯುತ್ತಿದೆ.

ಅಧ್ಯಕ್ಷರು :– ವೈಜ್ಞಾನಿಕವಾಗಿಯೋ, ಅವೈಜ್ಞಾನಿಕವಾಗಿಯೋ ರಾಜ್ಯದಲ್ಲಿ ಹಾಲಿನ ಬೆಲೆಯನ್ನು ಏರಿಸುವುದಕ್ಕೆ ಈಗಾಗಲೇ ಸರ್ಕಾರ ಒಪ್ಪಿಕೊಂಡಿದೆ. 15–20 ದಿವಸಗಳ ಸಮಯ ಕೇಳಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ :– ಮಂತ್ರಿಗಳಿಂದ ಉತ್ತರ ಬಂದರೆ ಒಪ್ಪಬಹುದು.

ಶ್ರೀ ಸಿ. ಬೈರೇಗೌಡ :– ಮಾನ್ಯ ಮಂತ್ರಿಗಳು ನನಗೆ ಒಂದು ಪತ್ರವನ್ನು ಕಳುಹಿಸಿದ್ದಾರೆ. ಅದರಲ್ಲಿ ಸರಿಯಾದ ಅಂಕಿ ಅಂಶಗಳನ್ನು ಇನ್ನೂ ಕೊಟ್ಟಿರುವುದಿಲ್ಲವೆಂದು ಹೇಳಿದ್ದಾರೆ. ಅಧಿಕಾರಿಗಳಾಗಿರತಕ್ಕವರು ಯಾರು ಈ ಮಾಹಿತಿಯನ್ನು ಒದಗಿಸಿಲ್ಲವೋ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳಲು ಸರ್ಕಾರ ಮುಂದಾಗಬೇಕು; ಸುಮ್ಮನೆ ಕುಳಿತರೆ ರೈತರ ಗತಿಯೇನಾಗಬೇಕು ?

ಅಧ್ಯಕ್ಷರು :– ಆಗಬಹುದು.

ಡಾ. ಡಿ. ಬಿ. ಗಂಗಪ್ಪ :– ಹೊನ್ನಾಳಿ ತಾಲ್ಲೂಕಿನಲ್ಲಿ ವೈದ್ಯರ ನಿರ್ಲಕ್ಷ್ಯದಿಂದ ಮಹಿಳೆಯೊಬ್ಬರು ಸಾವಿಗೀಡಾದ ವಿಚಾರದ ಬಗ್ಗೆ ಸರ್ಕಾರದ ಗಮನ ಸೆಳೆದಿದ್ದೆ. ಈಗ ಆರೋಗ್ಯ ಮಂತ್ರಿಗಳು ಇಲ್ಲಿಯೇ ಇದ್ದಾರೆ

ಅಧ್ಯಕ್ಷರು :– ಅದನ್ನು ನಾನು ನೋಡುತ್ತೇನೆ.

ಗಮನ ಸೆಳೆಯುವ ಸೂಚನೆಗಳು.

ವಿಷಯ :– 1) ಶರಾವತಿ ಸೇತುವೆಯ ದುಸ್ಥಿತಿಯಿಂದಾಗಿ ಸಂಚಾರಕ್ಕೆ ಅನಾನುಕೂಲ.

Sri R. V. Deshapande :– I call the attention of the Hon'ble Chief Minister regarding the inconvenience caused to the traffic due to bad conditions of Sharavathi Bridge.

† ಶ್ರೀ ಎಂ. ವೀರಪ್ಪ ಮೊಯ್ಲಿ (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :– ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ಕೊಡುವುದಕ್ಕೆ ನಾನು ಇಚ್ಛಿಪಡುತ್ತೇನೆ.

ಶರಾವತಿ ಸೇತುವೆಯು ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 17 ರಲ್ಲಿ ಬರುತ್ತದೆ. ಇದು 93 ಅಡಿ ಉದ್ದದ 34 ಕಂಡಿಗಳನ್ನು (SPAN) ಒಳಗೊಂಡಿದೆ. ಈ ಸೇತುವೆಯನ್ನು 1971 ನೇ ಇಸವಿಯಲ್ಲಿ ಪೂರ್ಣಗೊಳಿಸಿ ವಾಹನ ಸಂಚಾರಕ್ಕೆ ಬಿಡಲಾಗಿದೆ. ಇತ್ತೀಚೆಗೆ ಈ ಸೇತುವೆಯ ಒಂದು ಕಂಡಿಯಲ್ಲಿನ ಒಂದು ಗರ್ಡ್‌ರ್‌ನಲ್ಲಿ

ಒಂದು ಸಣ್ಣ ಬಿರುಕು ಕಂಡುಬಂದಿದೆ. ಆಗಸ್ಟ್ 1990 ರಲ್ಲಿ ಕೇಂದ್ರ ಸರ್ಕಾರದ ಮುಖ್ಯ ಇಂಜಿನಿಯರ್ (ಸೇತುವೆ) ಹಾಗೂ ಸೂಪರಿಂಟೆಂಡಿಂಗ್ ಇಂಜಿನಿಯರ್ (ಸೇತುವೆ)ರವರುಗಳು ಈ ಸೇತುವೆಯನ್ನು ಪರೀಕ್ಷಿಸಿ ಇದು ಅಪ್ಪೇನು ಗಂಡಾಂತರ ಅಲ್ಲವೆಂದು ತಿಳಿಸಿ ಮುಂಜಾಗ್ರತೆ ಕ್ರಮವಾಗಿ 10 ಟನ್‌ಗಿಂತ ಕಡಿಮೆ ಇರುವ ವಾಹನಗಳಿಗೆ ಮಾತ್ರವೇ ಏಕಪಥದಲ್ಲಿ ಸೇತುವೆಯಲ್ಲಿ ಬಿಡಲು ವ್ಯವಸ್ಥೆ ಮಾಡಲಾಗಿದೆ.

ಸದರಿ ಸೇತುವೆಯ ದುರಸ್ತಿ ಕಾರ್ಯಕ್ರಮಕ್ಕೆ ಈಗಾಗಲೇ ಕೇಂದ್ರ ಸರ್ಕಾರದವರು ಗುತ್ತಿಗೆದಾರರನ್ನು ಪ್ರಿಕ್ವಾಲಿಫೈ ಮಾಡಿದ್ದಾರೆ. ಅವರಿಂದ ಪರಿವೀಕ್ಷಣೆಯ ನಂತರ, ಈ ಸೇತುವೆಯ ದುರಸ್ತಿ ಆಗುವುದಿಲ್ಲ ಎಂದು ಕಂಡು ಬಂದರೆ ಹೊಸದಾಗಿ ಸೇತುವೆಯನ್ನು ನಿರ್ಮಿಸಲಾಗುತ್ತದೆ. ಹೊಸ ಸೇತುವೆಯ ನಿರ್ಮಾಣಕ್ಕೆ ಯೋಜನೆಯನ್ನು ತಯಾರಿಸಲು ಕೇಂದ್ರ ಸರ್ಕಾರಕ್ಕೆ ಈಗಾಗಲೇ 20.00 ಲಕ್ಷ ರೂ. ಗಳ ಸರ್ವೆ ಮತ್ತು ಇನ್‌ವೆಸ್ಟಿಗೇಷನ್ ಅಂದಾಜು ಪಟ್ಟಿಯನ್ನು ಕಳುಹಿಸಿಕೊಡಲಾಗಿದೆ.

ಈ ಬಗ್ಗೆ ಶೀಘ್ರ ತೀರ್ಮಾನ ತೆಗೆದುಕೊಳ್ಳಲು ಅನುವಾಗುವಂತೆ ಕೇಂದ್ರ ಸರ್ಕಾರದೊಡನೆ ಪ್ರಸ್ತಾವನೆಯನ್ನು ಚರ್ಚಿಸುವಂತೆ ಮುಖ್ಯ ಇಂಜಿನಿಯರ್ (ರಾಷ್ಟ್ರೀಯ ಹೆದ್ದಾರಿ) ರವರಿಗೆ ಸೂಚಿಸಲಾಗಿದೆ.

† ಶ್ರೀ ಆರ್. ವಿ. ದೇಶಪಾಂಡೆ :– ಮಾನ್ಯ ಅಧ್ಯಕ್ಷರೇ, ಮಾನ್ಯ ಶಿಕ್ಷಣ ಮಂತ್ರಿಗಳು ಮುಖ್ಯಮಂತ್ರಿಯವರ ಪರವಾಗಿ ಉತ್ತರ ಕೊಡುವಾಗ, ಈ ಬ್ರಿಡ್ಜ್ ಇನ್ನೂ ಸೇಫ್ ಆಗಿದೆಯೋ ಇಲ್ಲವೋ ಎಂಬ ನಿರ್ಣಯವನ್ನು ಹೇಳಿಲ್ಲ ಮತ್ತು ಅದೇ ಉತ್ತರದಲ್ಲಿ ಹತ್ತು ಟನ್ನುಗಳಿಗಿಂತ ಕಡಿಮೆ ಭಾರವಿದ್ದ ಲಾರಿಗಳಷ್ಟೇ ಈ ಬ್ರಿಡ್ಜ್ ಮೇಲೆ ಹೋಗಬಹುದೆಂದು ಉತ್ತರ ಕೊಟ್ಟಿದ್ದಾರೆ. ಇವುಗಳು ಒಂದಕ್ಕೊಂದು ಕಾಂಟ್ರರಿಯಾಗಿದೆ. ಏಕೆಂದರೆ ನಾನು ನಾಲ್ಕೈದು ದಿವಸಗಳ ಹಿಂದೆ ನಾನು ಅಲ್ಲಿದ್ದೆ. ಈಗಾಗಲೇ ಟ್ರಾಫಿಕ್ ರಿಸ್ಟ್ರಿಕ್ಟ್ ಮಾಡಿದ್ದಾರೆ.

12–50 ಪಿ. ಎಂ.

ಮಂಗಳೂರು ಸೈಡ್‌ನಿಂದ ಟ್ರಾಫಿಕ್ ಬಂದರೆ ಕುಮಟ ಸೈಡಿನದ್ದು ಟ್ರಾಫಿಕ್ ರಿಸ್ಟ್ರಿಕ್ಟ್ ಮಾಡುತ್ತಾರೆ. ಒಂದೇ ಸಾರಿ ಎರಡು ವಾಹನಗಳು ಹೋಗುವುದಿಲ್ಲ. ಕುಮಟ ಸೈಡ್‌ನಿಂದ ಟ್ರಾಫಿಕ್ ಹೋದರೆ ಮಂಗಳೂರು ಸೈಡಿನದ್ದು ರಿಸ್ಟ್ರಿಕ್ಟ್ ಮಾಡುತ್ತಾರೆ. ಒನ್‌ವೇ ಟ್ರಾಫಿಕ್ ಅಲ್ಲಿ ನಡೆಯುತ್ತಿದೆ. ಇದು ಇವೊತ್ತು ಬಂದ ಸಮಸ್ಯೆ ಅಲ್ಲ. ಇದನ್ನು ಮೂರು ನಾಲ್ಕು ವರ್ಷಗಳಿಂದ ಕೇಳುತ್ತಿದ್ದೇನೆ. ಅಲ್ಲಿ ನೇರವಾಗಿ ನಡೆಯಲಿಕ್ಕೆ ಬ್ರಿಡ್ಜ್ ಸೇಫ್ ಇದೆಯೋ ಇಲ್ಲವೋ ಎನ್ನುವ ಬಗ್ಗೆ ಜನರ ಮನಸ್ಸಿನಲ್ಲಿ ಒಂದು ಫಿಯರ್ ನಿರ್ಮಾಣವಾಗಿದೆ. ಏಕೆಂದರೆ, ಇದು ಬಹಳ ಇಂಪಾರ್ಟೆಂಟ್ ಬ್ರಿಡ್ಜ್. ಈ ಬ್ರಿಡ್ಜ್‌ನಲ್ಲಿ ತೊಂದರೆಯಾದರೆ

It is a link with the entire West Coast. The entire economy of Bombay- Rathnagiri Goa-North Karnataka-South Karnataka gets crippled.

ಇದು ಅಷ್ಟು ಇಂಪಾರ್ಟೆಂಟ್ ಬ್ರಿಡ್ಜ್. ಇದು ಒಂದು ಸಣ್ಣ ಬ್ರಿಡ್ಜ್ ಅಲ್ಲ, ಬಹಳ ದೊಡ್ಡ ಬ್ರಿಡ್ಜ್. ಇದೆ ಒಂದು; ಇನ್ನು ಎರಡನೆಯದು, ಇದು ಸೇಫ್ ಇದ್ದರೆ ಎರಡೂ ಕಡೆ ಟ್ರಾಫಿಕ್ ಏತಕ್ಕೆ ಶುರು ಮಾಡುತ್ತಿಲ್ಲ. ಅಥವಾ ಯಾವಾಗ ಶುರು ಮಾಡುತ್ತೀರಿ ? ಮೂರನೆಯದು, ಇದು ಸೇಫ್ ಇಲ್ಲ ಅಂದರೆ, ಅದಕ್ಕೆ ಎರಡು ಆಲ್ಟರ್‌ನೇಟೀವ್ ವೇಸ್ ಇದೆ. ಒಂದು, ಇದೇ ಬ್ರಿಡ್ಜ್‌ಅನ್ನು ನೀವು ಹೊಸದಾಗಿ ಕಟ್ಟಬೇಕಾಗುತ್ತದೆ. ಅಥವಾ ವೆಸ್ಟ್‌ಕೋಸ್ಟ್ ರೇಲ್ವೆಲೈನ್ ಹೊಸದಾಗಿ ಏನು ಮಂಜೂರಾಗಿದೆ, ಅದಕ್ಕೆ ಒಂದು ಸರ್ವೆರ ಆಗಿದೆ. ಅಲ್ಲಲ್ಲೇ ಒಂದು ಬ್ರಿಡ್ಜ್ ಮಾಡಬೇಕಾಗುತ್ತದೆ. ರೈಲು ಎಲ್ಲೇ ಹೋಗಬೇಕಾದರೂ ಸಹ ರಿವರ್ ಪಾಸ್ ಮಾಡಬೇಕಾಗುತ್ತದೆ. ಆದಕ್ಕೆ ಬ್ರಿಡ್ಜ್ ಬೇಕಾಗುತ್ತದೆ. ತಾವು ಹೊಸ ಬ್ರಿಡ್ಜ್ ಅಲ್ಲಿ ಕಟ್ಟಲಿಕ್ಕೆ ಸಾಧ್ಯವಾಗುತ್ತದೆ. ಮತ್ತೊಂದು ಪಾಸಿಬಿಲಿಟಿ ಏನೆಂದರೆ ಈಗಾಗಲೇ ಬಳಕೂಡ್ ಮಂಡಲದಲ್ಲಿ ಮಳೆಗೆ ಅಂತ ಒಂದು ಸಳ್ಳಿಯಿಂದ ಈಗಾಗಲೇ 7 ಬ್ರಿಡ್ಜ್‌ಸ್ ಸ್ಯಾಂಕ್ಷನ್ ಆಗಿದೆ. ಆ ಕೆಲಸ ಹಣ ಇಲ್ಲದೆ ನಿಂತಿದೆ. ಆ ಹಣ ಕೊಟ್ಟರೆ ಟೆಂಪರರಿಯಾಗಿ ಅಲ್ಲಿಂದ ಟ್ರಾಫಿಕ್ ಭಟ್ಕಳ್‌ಗೆ ಹೋಗಲಿಕ್ಕೆ ಸಾಧ್ಯವಾಗುತ್ತದೆ. ಈ ದೃಷ್ಟಿಯಿಂದ ತಾವು ಈ ಪ್ರಶ್ನೆಗೆ ಉತ್ತರ ಕೊಡಬೇಕು ಕಳೆದ 6 ವರ್ಷಗಳಿಂದ ಕೇವಲ ಮೈನರ್ ರಿಪೇರ್ಸ್‌ಗೆ ಲಕ್ಷಾವಧಿ ರೂಪಾಯಿ ಖರ್ಚು ಮಾಡುತ್ತಿದ್ದಾರೆ. ಅದರ ಸಲುವಾಗಿ ತಾವು ಸ್ಪಷ್ಟೀಕರಣ ನೀಡಬೇಕು. ಏಕೆಂದರೆ ಎಲ್ಲ ಕಡೆ ಭಯದ ವಾತಾವರಣ ಜನರಲ್ಲಿ ನಿರ್ಮಾಣವಾಗಿದೆ: ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

† ಶ್ರೀ ಹೆಚ್. ಏಕಾಂತಯ್ಯ :– ಈಗ ಮಾನ್ಯ ಮಂತ್ರಿಗಳು ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಏನು ಹೇಳಿಕೆ ನೀಡಿದ್ದಾರೆ; ಅದು ತೀವ್ರವಾದ ವಿರೋಧಾಭಾಸದಿಂದ ಕೂಡಿದೆ. ಮೊದಲನೆಯದಾಗಿ ಇದು

ಸಂಚಾರಕ್ಕೆ ಯೋಗ್ಯ ಅಲ್ಲ ಎನ್ನುವ ಮಾತನ್ನು ಹೇಳಿ, ಇದು ಅಷ್ಟೇನು ಗಂಡಾಂತರಕಾರಿ ಅಲ್ಲ ಎನ್ನುವ ಮಾತನ್ನು ಹೇಳಿದ್ದೀರಿ. ಹಾಗಾದರೆ ಅದು ಎಷ್ಟರಮಟ್ಟಿಗೆ ಗಂಡಾಂತರಕಾರಿ, ಎಷ್ಟರಮಟ್ಟಿಗೆ ಡೇಂಜರಸ್ ಎಂಬುದನ್ನು ಹೇಳಬೇಕು. ಒಂದು ಕಡೆ ದುರಸ್ತಿಕಾರ್ಯ ಏನಿದೆ ಅದನ್ನು ಮಾಡಬೇಕು ಎನ್ನುವ ಮಾತನ್ನು ಹೇಳಿದ್ದೀರಿ. ಹೀಗಾಗಿ ಎಷ್ಟು ಹಣ ಈ ದುರಸ್ತಿ ಕಾರ್ಯಕ್ಕೆ ಖರ್ಚು ಮಾಡಿದ್ದೀರಿ. ಎಲ್ಲದಕ್ಕಿಂತಲೂ ಹೆಚ್ಚಾಗಿ ಇದು ದುರಸ್ತಿ ಆಗುವುದಿಲ್ಲವೆಂದು ಕಂಡುಬಂದರೆ ಈಗ 20 ಲಕ್ಷ ರೂಪಾಯಿಗಳನ್ನು ನೀವು ಹೊಸದಾಗಿ ಅಂದಾಜು ಮಾಡಿದ್ದೀರಿ, ಹೊಸ ಕೆಲಸ ಮಾಡಬೇಕೆಂಬ ಒಂದು ಪ್ರಸ್ತಾವನೆ ತಮ್ಮ ಪರಿಶೀಲನೆಯಲ್ಲಿದೆ ಎನ್ನುವ ಮಾತನ್ನು ಹೇಳಿದ್ದೀರಿ; ಹಾಗಾದರೆ ಹಿಂದೆ ಏನು ಹಣ ಖರ್ಚು ಮಾಡಿದ್ದರು, ಅದು ಸರಿಯಾದಂಥ ರೀತಿಯಲ್ಲಿ ಕೆಲಸ ಆಗಿಲ್ಲ, ಒಂದು ಕಳಪೆ ರೀತಿಯಲ್ಲಿ ಈ ಒಂದು ಸೇತುವೆ ನಿರ್ಮಾಣವಾಗಿದೆ ಎಂಬುದನ್ನು ತಾವೇ ಒಪ್ಪಿಕೊಂಡಹಾಗೆ ಆಗುತ್ತದೆ. ಒಂದು ಪಕ್ಷ ಇದರ ಬಗ್ಗೆ ತಾವು ಏನಾದರೂ ವಿಚಾರಣೆ ಮಾಡಿ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದು ಕೊಳ್ಳುತ್ತೀರಾ ಎನ್ನುವ ಮಾತನ್ನು ಕೇಳುತ್ತೇನೆ.

† ಶ್ರೀ ಆರ್. ಎನ್. ನಾಯಕ್ :– ಅಧ್ಯಕ್ಷರೇ, ಸುಮಾರು 1980 ನೇ ಇಸವಿಯಿಂದ ಈ ಬ್ರಿಡ್ಜ್ ಬಗ್ಗೆ ಸಂಶಯಾಸ್ಪದವಾಗಿ ತನಿಖೆ ನಡೆಸುವುದು, ಸ್ವಲ್ಪ ಸ್ವಲ್ಪ ಟ್ರಾಫಿಕ್ ಬಂದ್ ಮಾಡುವುದು ಆನಂತರ ಪೋಲೀಸರನ್ನು ಹಾಕಿ ಆಚೆ, ಈಚೆ ನಿಲ್ಲಿಸಿ ಅದು ಸರಿ ಇಲ್ಲ ಎಂದು ನೋಡಿಸುವುದು.

(ಕೆಲವು ಮಾನ್ಯ ಸದಸ್ಯರು ಮಾನ್ಯ ಸಚಿವರಾದ ಪುಟ್ಟಸ್ವಾಮಿಗೌಡರ ಖುರ್ಚಿಯನ್ನೊರಗಿ ಮಾತನಾಡುತ್ತಿದ್ದರು)

ಅಧ್ಯಕ್ಷರು : ಮಾನ್ಯ ಮಂತ್ರಿಯವರ ಹೆಗಲ ಸವಾರಿ ಬಿಟ್ಟುಬಿಡಿ.

ಶ್ರೀ ವಾಟಾಳ್ ನಾಗರಾಜ್ :– ಅಧ್ಯಕ್ಷರೆ, ಹೆಗಲ ಸವಾರಿ ಮಾಡುತ್ತಿದ್ದವರೆಲ್ಲಾ ಹಿಂದಕ್ಕೆ ಹೋದರು.

ಅಧ್ಯಕ್ಷರು :– ಅವರ ಬಾಹುಬಲದ ಪರೀಕ್ಷೆ ಬೇಡ.

ಶ್ರೀ ಆರ್. ಎನ್. ನಾಯಕ್ :– ನಾನಾ ತರಹದ ರಿಪೇರಿಗಳನ್ನು ಸಂಶಯಾಸ್ಪದ ರೀತಿಯಲ್ಲಿ ಮಾಡುತ್ತಾ ಇರುವುದರಿಂದ ಈ ಒಂದು ಬ್ರಿಡ್ಜ್ ಇಂದುಬಿದ್ದುಹೋಗುತ್ತದೆಯೋ ಅಥವಾ ನಾಳೆ ಬಿದ್ದುಹೋಗುತ್ತದೆಯೋ ಎಂದು ಜನರ ಮನಸ್ಸಿನಲ್ಲಿಯೂ ಸಂಶಯ ನಡೆದಿದೆ. ಒಂದಷ್ಟು ಜನರು ಒಂದಿಷ್ಟು ಸಲ ಕೆಲಸ ಮಾಡುತ್ತಾರೆ, ಒಂದು ಸಾರಿ ಸ್ಟಾಪ್ ಮಾಡುತ್ತಾರೆ, ಮತ್ತೊಂದು ಕೆಲಸ ಮಾಡುತ್ತಾರೆ. ಹೀಗೆ ಅದು ಸಂಶಯಾಸ್ಪದ ರೀತಿಯಲ್ಲಿ ನಡೆದಿದೆ. ಸುಮಾರಾಗಿ 10 ವರ್ಷಗಳಿಂದ ಒಂದಲ್ಲ ಒಂದು ಅಧಿಕಾರಿಗಳಿಗೆ ಬರೆಯುತ್ತಿದ್ದೇನೆ, ಸರ್ಕಾರಕ್ಕೂ ಕೇಳುತ್ತಿದ್ದೇನೆ. ಸರಿಯಾದ ಉತ್ತರ ಈ ತನಕ ಬಂದಿಲ್ಲ. ಈಗ ಕೊಟ್ಟ ಉತ್ತರದಲ್ಲಿ ಅದು ರಿಪೇರಿಯಾಗಬೇಕೆಂದು ಸರಿಯಾಗಿ ತಿಳಿಸಿಲ್ಲ. ಅಥವಾ ಬ್ರಿಡ್ಜ್ ಬಿದ್ದು ಹೋಗುತ್ತದೆಂದು ಸರಿಯಾಗಿ ತಿಳಿಸಿಲ್ಲ.

ಈಗ ಯಾವುದಾದರೂ ಒಂದು ಹಂತಕ್ಕೆ ಬರಬೇಕು. ಏಕೆಂದರೆ ಈಗ ಗೋವಾದಲ್ಲಿ ಇದೇ ಕಂಪನಿಯವರು ಕಟ್ಟಿಸಿದ ಬ್ರಿಡ್ಜ್ ಈಗಾಗಲೇ ಬಿದ್ದುಹೋಗಿದೆ. ಎರಡನೆಯ ಸಾರಿ ಮತ್ತೆ ಬಿದ್ದುಹೋಯಿತು ಮಾಂಡವಿ ಬ್ರಿಡ್ಜ್. ಹಾಗೆ ಈ ಹೊನ್ನಾವರ ಬ್ರಿಡ್ಜ್ ಬಿದ್ದು ಹೋದರೆ ಮಂಗಳೂರು ಮತ್ತು ಬಾಂಬೆ ಸಂಪರ್ಕ ಕಡಿದು ಹೋಗುತ್ತದೆ. ಹೊಸದಾಗಿ ಬ್ರಿಡ್ಜ್‌ನ್ನು ಕಟ್ಟಬೇಕಾದರೆ ಇನ್ನೂ 10 ವರ್ಷ ಕಾಲ ಬೇಕಾಗುತ್ತದೆ. ಆದ್ದರಿಂದ ಸರ್ಕಾರದವರು ಇದರ ಬಗ್ಗೆ ಸಾರ್ವಜನಿಕರಿಗೆ ಸರಿಯಾದ ತಿಳುವಳಿಕೆಯನ್ನು ಕೊಡಬೇಕು. ಈ ಸೇತುವೆ ಬಿದ್ದು ಹೋಗುತ್ತದೆಯೇ ? ಬಿದ್ದು ಹೋಗುವುದಾದರೆ ಯಾವಾಗ ಬಿದ್ದುಹೋಗುತ್ತದೆ: ಬಿದ್ದು ಹೋಗದಿದ್ದರೆ ಇನ್ನೂ ಎಷ್ಟು ವರ್ಷಗಳ ವರೆಗೆ ಇದು ಹಾಗೇ ಇರುತ್ತದೆ ಎಂಬುದನ್ನು ಹೇಳಬೇಕು. ಇಲ್ಲಿ ಒಂದು ಬಹಳ ಪ್ರಮುಖವಾದ ವಿಚಾರವನ್ನು ಹೇಳುವುದಾದರೆ, ಈ ಬ್ರಿಡ್ಜ್ ಕಟ್ಟಿ ಟ್ರಾಫಿಕ್‌ನ್ನು ಆಲೋ ಮಾಡಿ ಇನ್ನೂ 25 ವರ್ಷ ಕೂಡ ಆಗಿಲ್ಲ. ಸಾಮಾನ್ಯವಾಗಿ ಯಾವುದೇ ಬ್ರಿಡ್ಜ್‌ನ್ನು ಕಟ್ಟಿದರೂ ಕೂಡ ಅದು ಕನಿಷ್ಟ 100 ವರ್ಷಕಾಲ ಬಾಳಿಕೆ ಬರುತ್ತದೆಂದು ಹೇಳುತ್ತಾರೆ. ಆದರೆ ಈ ಬ್ರಿಡ್ಜ್ ಕೇವಲ 25 ವರ್ಷಗಳಲ್ಲೇ ಇಂಥ ಸ್ಥಿತಿಗೆ ಬರುವುದಕ್ಕೆ ಕಾರಣ ಏನು ? ಆ ಸಂದರ್ಭದಲ್ಲಿ ಸಂಬಂಧಪಟ್ಟ ಇಂಜಿನಿಯರ್‌ಗಳು, ಅಧಿಕಾರಿಗಳು ಯಾರಿದ್ದರು ಅವರು ಸರಿಯಾದ ಪ್ರಮಾಣದಲ್ಲಿ ಸಿಮೆಂಟ್, ಕಬ್ಬಿಣ ಹಾಗೆರೆಯನ್ನು ಬಳಸಿದ್ದಾರೆಯೇ, ಇಲ್ಲವೇ ? ಎಂಬುದನ್ನು ನೋಡಬೇಕು. ಅವರು ಸರಿಯಾದ ಪ್ರಮಾಣದಲ್ಲಿ ವಸ್ತುಗಳನ್ನು ಬಳಸದಿದ್ದರೆ ಇವತ್ತು ಏತಕ್ಕೆ ಇಂಥ ಪರಿಸ್ಥಿತಿಗೆ ಈ ಬ್ರಿಡ್ಜ್ ಬಂತು ಎಂಬುದನ್ನು ತನಿಖೆ ಮಾಡಿಸಬೇಕು. ಆ ಅಧಿಕಾರಿಗಳು ಏನಾದರೂ ರಿಟೈರ್ಡ್ ಆಗಿದ್ದರೆ, ಅವರ ಮೇಲೆ ಕ್ರಿಮಿನಲ್ ಕೇಸನ್ನು ಏನಾದರೂ ತೆಗೆದು ಕೊಳ್ಳುವುದಕ್ಕೆ ಅವಕಾಶ ಇದೆಯೇ ? ಇಲ್ಲವೆ ? ಮತ್ತು ರಿಟೈರ್ಡ್ ಆಗದ ಅಧಿಕಾರಿಗಳ ಮೇಲೆ ಏನಾದರೂ

ಇದ್ದರೆ ಅವರನ್ನು ಕೂಡಲೇ ಸಸ್ಪೆಂಡ್ ಮಾಡಿ. ಎನ್‌ಕ್ವೈರಿ ಮಾಡಿಸುತ್ತೀರಾ ? ಎಂಬುದನ್ನು ಹೇಳಬೇಕು ನನ್ನ ತಿಳುವಳಿಕೆಯ ಪ್ರಕಾರ ಈ ಶರಾವತಿ ಬ್ರಿಡ್ಜ್ ಬಹಳ ಉದ್ದನೆಯ ಬ್ರಿಡ್ಜ್ : ಅಲ್ಲದೆ ಬಹಳ ಪ್ರಮುಖವಾದ ನ್ಯಾಷನಲ್ ಹೈವೇನಲ್ಲಿದೆ. ಆದುದರಿಂದ ನಾನು ಹೇಳುತ್ತಿದ್ದೇನೆ. ಈಗ ಬ್ರಿಡ್ಜ್‌ನ ಪರಿಸ್ಥಿತಿ ಏನಿದೆ ಎಂಬುದನ್ನು ತಾವು ದಯವಿಟ್ಟು ತಿಳಿಸಬೇಕು ಮತ್ತು ಹಿಂದೆ ಈ ಬ್ರಿಡ್ಜ್‌ನ್ನು ಕಟ್ಟಿಸಿದಂಥ ಅಧಿಕಾರಿಗಳಿಗೆ ಶಿಕ್ಷೆಯಾಗಬೇಕು. ಏಕೆಂದರೆ, ಪ್ರತಿಯೊಂದು ಸಾರಿಯೂ ಇಂಥ ಪ್ರಕರಣಗಳಾದಾಗ ಆ ಕೆಲಸವನ್ನು ಮಾಡಿದಂಥ ಅಧಿಕಾರಿಗಳು ರಿಟೈರ್ಡ್ ಆಗಿ ಮನೆಗೆ ಹೋದರು ಎಂದು ಹೇಳುತ್ತಿರುತ್ತಾರೆ. ಆ ರೀತಿ ಅವರನ್ನು ನೀವು ಸುಮ್ಮನೆ ಬಿಟ್ಟರೆ ಮುಂದೆ ಎಲ್ಲರೂ ಕೂಡ ಇಂಥ ಬ್ರಿಡ್ಜ್‌ಗಳನ್ನೇ ಕಟ್ಟುವುದಕ್ಕೆ ಪ್ರಾರಂಭ ಮಾಡುತ್ತಾರೆ. ಇಂಥ ಅನಾಹುತ ನಡೆದಾಗ ಯಾವುದೇ ಸರ್ಕಾರವಾಗಲಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮವನ್ನು ತೆಗೆದುಕೊಂಡಂಥ ದಾಖಲೆಗಳಿದ್ದರೆ ದಯವಿಟ್ಟು ತಿಳಿಸಬೇಕು. ಈ ರೀತಿಯ ಕಳಪೆ ಕೆಲಸವನ್ನು ಮಾಡಿದಂಥ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಂಡು ಎನ್‌ಕ್ವೈರಿ ಮಾಡಿಸಲು ಪ್ರಯತ್ನ ಮಾಡುತ್ತೀರಾ ಎಂಬುದನ್ನು ತಿಳಿಯಬೇಕು.

ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಇನ್ನೊಂದು ಸೂಚನೆಯನ್ನು ಕೊಟ್ಟರು. ಬಳಕೂರು ಮಂಡಲ ರಸ್ತೆ ಏನಿದೆ ಅದನ್ನು ಸರಿಪಡಿಸಿದರೆ ಅದಕ್ಕೂ ಟ್ರ್ಯಾಫಿಕ್ ಆಗುತ್ತದೆಂದು ಹೇಳಿದರು. ಆದರೆ ಅದಕ್ಕೂ ಇದಕ್ಕೂ ಸಂಬಂಧವಿಲ್ಲ. ಇದು ಶರಾವತಿ ನದಿ ಕ್ರಾಸಿಂಗ್‌ಗೆ ಇದೆ. ಆದ್ದರಿಂದ ಆ ರಸ್ತೆಗೆ ಏನು ಹಣವನ್ನು ಕೊಡಬೇಕೋ ಅದನ್ನು ಕೊಡಬೇಕು. ಆದರೆ ಇದಕ್ಕೆ ಸಂಬಂಧ ಪಡುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ :– ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರಾದ ದೇಶಪಾಂಡೆಯವರು, ಪಕಾಂತಯ್ಯನವರು ಮತ್ತು ನಾಯಕ್‌ರವರು ಹೇಳಿದಂಥ ವಿಚಾರದಲ್ಲಿ ಯಾವುದೇ ರೀತಿಯ ಭಿನ್ನಾಭಿಪ್ರಾಯವೂ ಇಲ್ಲ. ಆದರೆ ಒಂದು ವಿಚಾರ ಎಂದರೆ ವಿಕತ್ತ್ವವಾಗಿ ಏನು ನಿರ್ಬಂಧವನ್ನು ವಿಧಿಸಿದ್ದಾರೆ, ಅದು ಕೇವಲ 1 ತಿಂಗಳಿಗೆ ಮಾತ್ರ. ಇದಕ್ಕೆ ಮುಂಚಿತವಾಗಿ ಇಲ್ಲಿ ರಿಸ್ಟ್ರಿಕ್ಷನ್ ಇರಲಿಲ್ಲ. ಈ ಸೇತುವೆಯಲ್ಲಿರುವಂಥ ಲೋಪ ದೋಷವನ್ನು ಕಳೆದ 3 ವರ್ಷಗಳ ಹಿಂದೆಯೇ ಗುರ್ತಿಸಲಾಗಿದೆ. ಆದರೆ ಈಗ 1 ತಿಂಗಳಿಂದ ಮಾತ್ರ ಈ ನಿರ್ಬಂಧವನ್ನು ವಿಧಿಸಿದ್ದಾರೆ. ಏಕೆಂದರೆ, ಸ್ವಲ್ಪ ಮುಂಜಾಗರೂಕತಾ ಕ್ರಮವಾಗಿ ಇದರಲ್ಲಿ ಏನು ಲೋಪ-ದೋಷ ಇದೆ; ಅದನ್ನು ಇಲ್ಲವೆಂದು ನಾನು ಹೇಳುವುದಿಲ್ಲ. ಆದುದರಿಂದಲೇ ಇದನ್ನು ಪರಿವೀಕ್ಷಣೆಗೆ ಒಳಪಡಿಸಿ ಚೆನ್ನಾಗಿ ಪರೀಕ್ಷೆ ಮಾಡಿ ಪ್ರಾಥಮಿಕವಾಗಿ ಈ ಒಂದು ಸೇತುವೆಯನ್ನು ದುರಸ್ತಿ ಮಾಡತಕ್ಕ ಪ್ರಯತ್ನ ನಡೆಯುತ್ತಿದೆ. ಈ ಬಗ್ಗೆ ಈಗಾಗಲೇ ಸಂಬಂಧಪಟ್ಟ ಪರಿಣತರಿಗೆ ಇನ್‌ವೆಸ್ಟಿಗೇಷನ್‌ಗೋಸ್ಕರ ಕಳುಹಿಸಿ ಕೊಡಲಾಗಿದೆ. ಇನ್‌ವೆಸ್ಟಿಗೇಷನ್ ಆಗುತ್ತಿದೆ. ಆದರೂ ಇದರ ಬಗ್ಗೆ ಮುಂಜಾಗರೂಕತೆಯನ್ನು ವಹಿಸತಕ್ಕ ಆವಶ್ಯಕತೆ ಇದೆ. ಇದು ಅನುಪಯುಕ್ತವಾಗಿದೆ ಎನ್ನತಕ್ಕ ವಾದಕ್ಕೆ ಸರ್ಕಾರ ಬಂದಿಲ್ಲ. ಇದು ಕೇವಲ ಮುಂಜಾಗರೂಕತೆಗೋಸ್ಕರ ಅಷ್ಟೆ.

ಇನ್ನು ಎರಡನೆಯದಾಗಿ ಹೇಳುವುದಾದರೆ ಕೊಂಕಣ ರೇಲ್ವೆಯವರು ಒಂದು ರೇಲ್ವೆ ಲೈನ್ ಮಾಡುತ್ತಿರುವುದರಿಂದ ಅವರ ಜೊತೆಯಲ್ಲಿ ಕೂಡ ರೇಲ್ವೆ-ಕಂ-ರೋಡ್ ಎಂದು ವಿತಕ್ಕೆ ಮಾಡಬಾರದೆಂದು ಅವರ ಜೊತೆಯಲ್ಲಿ ಕೂಡ ಸಮಾಲೋಚನೆ ಮಾಡುತ್ತಿದ್ದೇವೆ. ಇನ್‌ವೆಸ್ಟಿಗೇಷನ್‌ನಲ್ಲಿ ಇದನ್ನು ಪುನರ್ ವ್ಯವಸ್ಥೆ ಮಾಡಲಿಕ್ಕೆ ಸಾಧ್ಯವಾಗದಿದ್ದರೆ ರೇಲ್ವೆಯವರ ಜೊತೆ ಸಮಾಲೋಚನೆ ಮಾಡಿ ರೇಲ್ವೆ ಲೈನಿಗೆ ಸಮಾನಾಂತರವಾದ ಒಂದು ಸೇತುವೆಯನ್ನು ನಿರ್ಮಾಣ ಮಾಡತಕ್ಕ ವಿಚಾರದಲ್ಲಿ ಸರ್ಕಾರ ಬಹಳ ಕ್ಷಿಪ್ರವಾಗಿ ಕ್ರಮ ತೆಗೆದುಕೊಳ್ಳುತ್ತದೆ. ಆದರೆ ಇದು ಶಿಥಿಲವಾಗಿದೆ, ಅನುಪಯುಕ್ತವಾಗಿದೆ ಎಂಬ ಭಾವನೆ ಸಾರ್ವಜನಿಕರ ಮನಸ್ಸಿನಲ್ಲಿ ಬರತಕ್ಕಂಥ ಆವಶ್ಯಕತೆ ಇಲ್ಲ. ಆದರೆ ಇದನ್ನು ರಿಪೇರಿ ಮಾಡತಕ್ಕದ್ದು ಮತ್ತು ರೇಲ್ವೆ ಲೈನಿಗೆ ಸಮಾನಾಂತರವಾಗಿ ಸೇತುವೆಯೊಂದನ್ನು ರಚನೆ ಮಾಡತಕ್ಕ ವಿಚಾರದಲ್ಲಿ ಕ್ಷಿಪ್ರವಾಗಿ ರೇಲ್ವೆಯವರ ಜೊತೆ ಸಮಾಲೋಚನೆಮಾಡಿ ಸೂಕ್ತ ನಿರ್ಣಯವನ್ನೂ ಕೂಡ ಆದಷ್ಟು ಜಾಗ್ರತೆ ತೆಗೆದುಕೊಳ್ಳುತ್ತೇವೆಂದು ಹೇಳಲಿಚ್ಛಿಸುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ :– ಮಾನ್ಯ ಅಧ್ಯಕ್ಷರೇ, ಈಗ ತಾವು ಹೇಳಿದಿರಿ. ಈ ಪ್ಯಾರರಲ್ ರೇಲ್ವೆ ಸೇತುವೆ ಏನು ಆಗುತ್ತದೆ ಅಲ್ಲಿ ಸೇತುವೆ ಕಟ್ಟುವ ಬಗ್ಗೆ ಪರೀಕ್ಷೆ ಮಾಡುತ್ತಿರುವುದು ಸಂತೋಷದ ಸಂಗತಿ ನಾನು ಮತ್ತೊಂದು ಸಲಹೆಯನ್ನು ಕೊಟ್ಟಿದ್ದೇನೆ, ಏನೆಂದರೆ ಈಗಾಗಲೇ ಬಳಕೂರ್ ಮಂಡಲ್‌ದಲ್ಲೆಲ್ಲಿ 7 ಬ್ರಿಡ್ಜ್‌ಸ್‌ಗಳು ಅಂಚರ್ ಕಂಪ್ಲಿಷನ್ ಇವೆ. ತಾವು ಸ್ವಲ್ಪ ಹಣವನ್ನು ವಿಚರ್ು ಮಾಡಿದರೆ ಕೂಡಲೆ ಹೊನ್ನಾವರದಿಂದ ಭಟ್ಕಳ್‌ಗೆ ಹೋಗಲು ಸಾಧ್ಯತೆ ಬರುತ್ತದೆ. ಇದು ಆಗದಿದ್ದರೆ ಈ ಬ್ರಿಜ್ಜ್‌ಗೆ ಏನಾದರೂ ಪ್ರಾಬ್ಲಮ್ ಆದರೆ, ಹೊನ್ನಾವರದಿಂದ ಸ್ಪ್ರೈಟ್ ಸಿದ್ದಾಪುರಕ್ಕೆ ಹೋಗಿ ಸೌತ್‌ಕೆನರಾಕ್ಕೆ ಹೋಗಬೇಕಾಗುತ್ತದೆ ಇದರ ಬಗ್ಗೆಯೂ ಕೂಡ ಮಾನ್ಯ ಸಚಿವರು ಉತ್ತರ ಕೊಟ್ಟಿಲ್ಲ. ಇದು ಒಂದು. ಇನ್ನು ಎರಡನೆಯದಾಗಿ

ತಾವು ರಿಪೇರಿಯ ಬಗ್ಗೆ ಹೇಳುತ್ತಿದ್ದೀರಿ. ನನಗೂ ಗೊತ್ತು, ತಮಗೆ ಇಲ್ಲಿಯವರೆಗೆ ಅದಕ್ಕೆ ಎಷ್ಟು ಹಣವನ್ನು ಖರ್ಚು ಮಾಡಿದ್ದಾರೆಂಬುದನ್ನು ಹೇಳುವುದಕ್ಕೆ ಸಾಧ್ಯವಾಗ ವುದಿಲ್ಲ. ಆದರೆ ತಾವು ಸರ್ಕಾರದಿಂದ ಪರಿಶೀಲನೆ ಮಾಡಬೇಕು. ಲಕ್ಷಾವಧಿ ರೂಪಾಯಿಗಳನ್ನು ಕಳೆದ ಎರಡೂವರೆ-ವರ್ಷಗಳಿಂದ ಖರ್ಚು ಮಾಡುತ್ತಿದ್ದಾರೆ. ಇದೇ ಪ್ರಕಾರವಾಗಿ ಹಣವನ್ನು ಖರ್ಚು ಮಾಡುತ್ತಾ ಹೋದರೆ, ಹೊಸ ಬ್ರಿಡ್ಜ್‌ನ್ನು ಮಾಡಲಿಕ್ಕೂ ಸಾಧ್ಯ-ವಾಗುತ್ತದೆ. ಇದರ ಬಗ್ಗೆಯೂ ಪರಿಶೀಲನೆ ಮಾಡುತ್ತೀರೆಂಬ ಭರವಸೆಯನ್ನು ಕೊಡಬೇಕು. ಮೂರನೆಯ-ದ್ದಾಗಿ ತಾವು ಉತ್ತರದಲ್ಲಿ ಹೇಳಿದ್ದೀರಿ, 20 ಲಕ್ಷ ರೂಪಾಯಿಗಳ ಎಸ್ಟಿಮೇಟ್ ಮಾಡಿದ್ದಾರೆಂದು. ಇದಕ್ಕೆ ನಗಬೇಕೋ ಏನು ಮಾಡಬೇಕೆಂಬುದು ಗೊತ್ತಾಗುತ್ತಿಲ್ಲ. ಏತಕ್ಕೆಂದರೆ ಬ್ರಿಡ್ಜ್ ಅರ್ಧ ಕಿಲೋಮೀಟರ್ ಉದ್ದ ಇದೆ. 20 ಲಕ್ಷ ರೂಪಾಯಿಗಳ ಎಸ್ಟಿಮೇಟ್ ಮಾಡಿದ್ದಾರೆಂದರೆ ಆಶ್ಚರ್ಯವಾಗುತ್ತದೆ.

ಅಧ್ಯಕ್ಷರು :– ಅದರ ವೈಟ್‌ವಾಲ್ಸ್‌ಗೆ ಇರಬಹುದು.

ಶ್ರೀ ಆರ್. ವಿ. ದೇಶಪಾಂಡೆ :– ವೈಟ್‌ವಾಲ್ಸ್‌ಗೆ ಇರಬಹುದು.

ಶ್ರೀ ಎಂ. ವೀರಪ್ಪ ಮೊಯಿಲಿ :– ಅದು ಸರ್ವೆ ಆಂಡ್ ಇನ್‌ವೆಸ್ಟಿಗೇಷನ್ ಮಾಡಲಿಕ್ಕೆ.

ಅಧ್ಯಕ್ಷರು :– ಹೌದು ಸರ್ವೆ ಮಾಡಲಿಕ್ಕೆ ಇರಬಹುದು. ಏಕೆಂದರೆ ನೀವೇ ಹೇಳಿದಿರಲ್ಲ: ಅದು ಒಂದು ದೊಡ್ಡ ಬ್ರಿಡ್ಜ್ ಎಂದು.

ಶ್ರೀ ಆರ್. ವಿ. ದೇಶಪಾಂಡೆ : ಸರ್ವೆ ಮಾಡಲಿಕ್ಕೆ 20 ಲಕ್ಷ ರೂಪಾಯಿಗಳಾದರೆ ಬ್ರಿಡ್ಜ್ ಆಗಬೇಕಾದರೆ 20 ಕೋಟಿ ರೂಪಾಯಿಗಳೇ ಬೇಕಾಗುತ್ತದೆ. ಇದರ ಬಗ್ಗೆ ಸರ್ವೆ ಮಾಡಲಿಕ್ಕೆ 20 ಲಕ್ಷ ರೂಪಾಯಿಗಳ ಅವಶ್ಯಕತೆ ನನಗೇನೂ ಕಾಣಿಸುವುದಿಲ್ಲ.

That is absolutely not necessary. It is a link between Honnavar-Bhatkal. As I have told you the entire economy of the West-Coast will be crippled.

ಈ ದೃಷ್ಟಿಯಿಂದ ಇದನ್ನು ಸಹ ತಾವು ಪರಿಶೀಲನೆ ಮಾಡಿ ಆದಷ್ಟು ಬೇಗ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಎನ್. ನಾಯಕ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳಿಗೆ ನಾನು ವಿನಂತಿ ಮಾಡಿದ್ದೆ. ಕೆಟ್ಟ ಅಧಿಕಾರಿ ಇದ್ದರೆ ಅವರ ಬಗ್ಗೆ ಏನಾದರೂ ಮಾಡಬೇಕೆಂದು ಒಂದು ಎಕ್ಸಾಂಪಲ್ ಆಗಲಿ. ಈ ರಾಜ್ಯದಲ್ಲಿ ಬಹುದೊಡ್ಡ ಬ್ರಿಡ್ಜ್ ಪರಿಸ್ಥಿತಿ ಹೀಗಾಗಿದೆ ಎಂದು ಹೇಳುವುದಾದರೆ ಸಣ್ಣಪುಟ್ಟ ಬ್ರಿಡ್ಜ್‌ಸ್‌ಗಳ ಗತಿ ಏನು ಎನ್ನುವುದು ಗೊತ್ತಿಲ್ಲ. ಆದ್ದರಿಂದ ಒಂದು ಉದಾಹರಣೆ, ಒಂದು ಶೋಕಾಸ್ ಹೊರಡಿಸಿ ಕೆಲವರನ್ನಾದರೂ ಸಸ್ಪೆಂಡ್ ಮಾಡಿ. ಏನಾದರೂ ಪ್ರಯತ್ನ ಮಾಡುತ್ತೀರಾ ನೋಡಿ. ಏತಕ್ಕೆಂದರೆ ನಮ್ಮ ಸರ್ಕಾರ ಇದ್ದಾಗ ಇದನ್ನು ಮಾಡುತ್ತದೆಂದು ನಾನು ಭಾವಿಸಿದ್ದೇನೆ. ಇದನ್ನು ಪರಿಶೀಲಿಸಿ ನೋಡಿ.

ಶ್ರೀ ಎಂ. ವೀರಪ್ಪ ಮೊಯಿಲಿ :– ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ದೇಶಪಾಂಡೆಯವರು ಬೇಳಿದಹಾಗೆ ಪರ್ಯಾಯವಾದ ಒಂದು ರಸ್ತೆ, ಕೆಲವು ಸೇತುವೆಗಳ ರಚನೆ ಮಾಡತಕ್ಕಂಥ ಸಂದರ್ಭದಲ್ಲಿ ಅದನ್ನು ಮಾಡಲಿಕ್ಕೆ ಸಾಧ್ಯವಿದೆ. ಅದನ್ನು ಆಲೋಚನೆ ಮಾಡೋಣ. ಮಾನ್ಯ ನಾಯಕರು ಹೇಳಿದ ವಿಚಾರವೇನೆಂದರೆ 1971ನೇ ಇಸವಿಯಲ್ಲಿ ಆದಂಥ ಸೇತುವೆ. ಇದು ಇಷ್ಟು ಬೇಗನೆ ಈ ರೀತಿ ನಾದುರಸ್ತಿ ಆಗಲಿಕ್ಕೆ ಏನು ಕಾರಣ ? ಇದನ್ನು ತನಿಖೆ ಮಾಡಬೇಕೆಂದು ಹೇಳಿದರು; ಇದನ್ನು ಕೂಡ ವಿಚಾರ ಮಾಡುತ್ತೇನೆ. ಆ ಮೇಲೆ 20 ಲಕ್ಷ ಏನು ಇದೆ, ಅದು ಸರ್ವೆ ಮತ್ತು ಇನ್‌ವೆಸ್ಟಿಗೇಷನ್‌ಗೆ ಬೇಕಾಗುತ್ತದೆಂದು ಹೇಳಿ ಅವರು ಅಂದಾಜು ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದಾರೆ.

ಶ್ರೀ ಕೆ. ಹೆಚ್. ರಂಗನಾಥ್ :– ಮಾನ್ಯ ಸದಸ್ಯರು ಬ್ರಿಡ್ಜ್ ಯಾವಾಗ ಬೀಳುತ್ತದೆ ಎನ್ನುವುದಕ್ಕೆ ಎಸ್ಟಿಮೇಟ್ ಮಾಡಬೇಕೆಂದು ಹೇಳಿದ್ದುದು.

ಅಧ್ಯಕ್ಷರು :– ಈ 20 ಲಕ್ಷ ರೂಪಾಯಿ ಅದಕ್ಕೆ ಸಂಬಂಧಪಟ್ಟಿಲ್ಲ.

ಶ್ರೀ ಕೆ. ಹೆಚ್. ರಂಗನಾಥ್ – ಅದು ಅವರು ಬಹಳ ಪ್ರಮುಖವಾಗಿ ಬೇಳಿದ ಪ್ರಶ್ನೆ.

ಶ್ರೀ ಎಂ. ವೀರಪ್ಪ ಮೊಯಿಲಿ :– ಈ 20 ಲಕ್ಷ ರೂಪಾಯಿನಲ್ಲಿ ಅದು ಸೇರಿಲ್ಲ. ಆದರೆ 20 ಲಕ್ಷ ರೂಪಾಯಿ ಬಹಳ ದುಬಾರಿಯಾಯಿತೆಂದು ತಾವು ಹೇಳುತ್ತೀರಿ. ನಾನು ಇದರಲ್ಲಿ ಪರಿಣಿತನಲ್ಲ; ಸಂಬಂಧಪಟ್ಟವರು ಒಂದು ಅಂದಾಜು ಪಟ್ಟಿ ಮಾಡಿದ್ದಾರೆ.

That will be scrutinised by the Government of India; A foreign agency has been involved for con'ucting survey and investigation work. This has already been entrusted to them.

ರಿಪೇರಿಗೆ ಈಗಾಗಲೇ ಬಹಳಷ್ಟು ಖರ್ಚು ಮಾಡಿದ್ದೇವೆಂದು ತಾವು ಹೇಳಿದ್ದೀರಿ. ಅದನ್ನೂ ವಿಚಾರ ಮಾಡುತ್ತೇನೆ.

ವಿಷಯ (2) :– ಹುಬ್ಬಳ್ಳಿ–ಧಾರವಾಡ ಮಹಾನಗರದಲ್ಲಿ ಕುಡಿಯುವ ನೀರಿನ ತೊಂದರೆ.

ಶ್ರೀ ಗೋಪಿನಾಥ ಆರ್. ಸಾಂಡ್ರಾ (ಹುಬ್ಬಳ್ಳಿ) :– ಮಾನ್ಯ ಅಧ್ಯಕ್ಷರೇ, ಹುಬ್ಬಳ್ಳಿ–ಧಾರವಾಡ ಮಹಾ ನಗರದ ಕುಡಿಯುವ ನೀರಿನ ಪರಿಸ್ಥಿತಿ ದಿನೇ ದಿನೇ ಗಂಭೀರವಾಗುತ್ತಿರುವುದರ ಬಗ್ಗೆ ಮಾನ್ಯ ನಗರಾಭಿವೃದ್ಧಿ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

† ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :– ಮಾನ್ಯ ಅಧ್ಯಕ್ಷರೇ, ತಮ್ಮ ಅನುಮತಿ ಕೋರಿ ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ಸಧ್ಯ ಉಣಕಲ್ ಕೆರೆ ಬತ್ತಿಹೋಗಿದೆ ಹಾಗೂ ಪ್ರತಿದಿನ 7.50 ಎಂ. ಜಿ. ಡಿ. ನೀರನ್ನು ಮಲಪ್ರಭಾ ಜಲಾಶಯದಿಂದ ಹಾಗೂ 7.50 ಎಂ. ಜಿ. ಡಿ. ನೀರನ್ನು ನೀರಸಾಗರ ಜಲಾಶಯದಿಂದ ದಿನಬಿಟ್ಟು ದಿನ ಸರಬರಾಜು ಮಾಡಲಾಗುತ್ತಿದೆ ಇದಲ್ಲದೆ ಇಲ್ಲಿಯವರೆಗೆ 497 ಕೊಳವೆ ಬಾವಿಗಳನ್ನು ತೋಡಲಾಗಿದೆ. ನೀರಸಾಗರ ಜಲಾಶಯದಲ್ಲಿ ಇರುವ ನೀರನ್ನು ಬಿಟ್ಟು ದಿನ ಪಂಪ್ ಮಾಡಿದರೆ ನೀರು ಜೂನ್ 1991ರ ಕೊನೆಯವರೆಗೆ ದೊರೆಯುತ್ತದೆ.

ನೀರು ಸರಬರಾಜನ್ನು ಸುಧಾರಿಸಲು ಕೊಳವೆ ಬಾವಿಗಳನ್ನು ಅವಳಿ ನಗರದ ಎಲ್ಲಾ ಪ್ರದೇಶಗಳಲ್ಲಿ ತೋಡಲಾಗಿದೆ ಹಾಗೂ ಇವುಗಳಿಗೆ ಕೈಪಂಪನ್ನು ಹಾಗೂ ವಿದ್ಯುತ್ ಪಂಪನ್ನು ಅಳವಡಿಸಲಾಗಿದೆ. ಇವುಗಳ ವಿವರವು ಕೆಳಕಂಡಂತೆ ಇರುತ್ತದೆ.

ನಗರದ ಹೆಸರು	ಒಟ್ಟು ಕೊಳವೆ ಬಾವಿಗಳನ್ನು ತೋಡಿರುವ ಸಂಖ್ಯೆ	ವಿಫಲವಾದ ಕೊಳವೆ ಬಾವಿಗಳು	ಕೈಪಂಪನ್ನು ಅಳವಡಿಸಿರುವ ಕೊಳವೆ ಬಾವಿಗಳ ಸಂಖ್ಯೆ	ವಿದ್ಯುತ್ ಪಂಪನ್ನು ಅಳವಡಿಸಿರುವ ಕೊಳವೆ ಬಾವಿಗಳ ಸಂಖ್ಯೆ
ಹುಬ್ಬಳ್ಳಿ	366	3	343	20
ಧಾರವಾಡ	131	2	120	9
ಒಟ್ಟು :	497	5	463	29

ಮೇಲೆ ತಿಳಿಸಲಾದ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಂಡು ಕುಡಿಯುವ ನೀರಿನ ಪರಿಸ್ಥಿತಿಯನ್ನು ಸುಧಾರಿಸಲು ಹುಬ್ಬಳ್ಳಿ ಧಾರವಾಡ ಮಹಾನಗರದ ನೀರಿನ ಅತೀ ಬವಣೆ ಇರುವ ಭಾಗಗಳಲ್ಲಿ ಕೊಳವೆ ಬಾವಿಗಳನ್ನು ಕೊರೆಯಲಾಗುವುದು.

† ಶ್ರೀ ಗೋಪಿನಾಥ ಆರ್. ಸಾಂಡ್ರಾ :– ಮಂತ್ರಿಗಳು ಕೊಟ್ಟಂತಹ ಉತ್ತರ ಸಮಾಧಾನಕರವಾಗಿಲ್ಲ. ಹುಬ್ಬಳ್ಳಿ ಧಾರವಾಡ ಮಹಾ ನಗರದಲ್ಲಿ ಕುಡಿಯುವ ನೀರಿನ ಬವಣೆ ಬಹಳಷ್ಟು ಇದೆ. ಈಗ ನಾವು ಮಲಪ್ರಭಾ ಯೋಜನೆಯ ಎರಡನೇ ಹಂತವನ್ನು ಏನು ತೆಗೆದುಕೊಂಡು ಬಂದಿದ್ದೇವೆ, ಇದರ ಪೌಂಡೇಷನ್ ಸ್ಟೋನ್ ಹಾಕಿ 5 ತಿಂಗಳಾಯಿತು. ಅಲ್ಲಿಯೂ ಕೂಡ ಏನು ಪ್ರೋಗ್ರೆಸ್ ಆಗುತ್ತಿಲ್ಲ. ಇದಲ್ಲದೆ ಕೆ. ಯು. ಡಬ್ಲು. ಎಸ್. ನವರಿಗೆ 7 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಕೊಟ್ಟಿದ್ದರೆ ಅದರಲ್ಲಿ ಒಂದು ಕೋಟಿ 13 ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದಾರೆ. ಯಾವುದೇ ಕೆಲಸ ಸಂಪೂರ್ಣವಾಗಿ ಆಗಿಲ್ಲ. ಉಣಕಲ್‌ಕೆರೆ